# ALPS PANIYE

## ACADEMIC MASTER PLAN

## 2025-26

## ಶಾಲೆ ಹೆಸರು: ಅನುದಾನಿತ ಕಿರಿಯ ಪ್ರಾಥಮಿಕ ಶಾಲೆ ಪಣೆಯೆ

## ಮುನ್ನುಡಿ

ಕಾಸರಗೋಡು ಜಿಲ್ಲೆಯ ಕಾರಡ್ಕ ಗ್ರಾಮದ ಒಂದನೇ ವಾರ್ಡಿನ ಪಣೆಯೆ ಎಂಬ ಗ್ರಾಮೀಣ ಪ್ರದೇಶದಲ್ಲಿ ನಮ್ಮ ಈ ಕಿರಿಯ ಪ್ರಾಥಮಿಕ ಶಾಲೆ ಇರುವುದು. ಈ ಶಾಲೆಯು 1951 ರಲ್ಲಿ ಮದ್ರಾಸ್ ಸರಕಾರದ ಅಂಗೀಕಾರದೊಂದಿಗೆ ದಿವಂಗತ ಶ್ರೀ ಸುಬ್ರಾಯ ಭಟ್ಟರ ಪ್ರಯತ್ನದ ಮೇರೆಗೆ ಊರವರ ಸಹಕಾರದೊಂದಿಗೆ ಸ್ಥಾಪನೆಗೊಂಡಿತು. ಪ್ರಕೃತ ಶ್ರೀ ಕಡಂದೇಲು ಸರಸ್ವತಿ ಎಜ್ಯುಕೇಶನ್ ಟ್ರಸ್ಟಿನ ಆಡಳಿತಕ್ಕೊಳಪಡಿಸಿ ಈ ಶಾಲೆಯ ವ್ಯವಸ್ಥಾಪಕರಾಗಿ ಶ್ರೀ ಎಂ ನಾರಾಯಣ ಭಟ್ ಕಾರ್ಯನಿರ್ವಹಿಸುತ್ತಿದ್ದಾರೆ.

## ಅವಲೋಕನ

2025 -26 ನೇ ಶೈಕ್ಷಣಿಕ ವರ್ಷದಲ್ಲಿ 19 ಹುಡುಗರೂ 19 ಹುಡುಗಿಯರೂ ಒಟ್ಟು ಸೇರಿ 38 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಪ್ರಸ್ತುತ ಕನ್ನಡ ಮಾಧ್ಯಮದಲ್ಲಿ ಮಾತ್ರ ಶಿಕ್ಷಣ ನೀಡಲಾಗುತ್ತಿದ್ದು ಮುಖ್ಯೋಪಾಧ್ಯಾಯಿನಿ ಸಹಿತ ನಾಲ್ಕು ಮಂದಿ ಅಧ್ಯಾಪಕರು ಶಾಶ್ವತ ನೇಮಕಾತಿಯೊಂದಿಗೆ ಕೆಲಸ ನಿರ್ವಹಿಸುತ್ತಿದ್ದಾರೆ. ಈ ಅಧ್ಯಯನ ವರ್ಷದ ಆರಂಭ ದಿನದ ಪ್ರವೇಶೋತ್ಸವದಿಂದ ತೊಡಗಿ ವಿಶ್ವ ಪರಿಸರ ದಿನ, ವಾಚನಾವಾರ, ಯೋಗ ದಿನ, ವನಮಹೋತ್ಸವ, ಚಾಂದ್ರ ದಿನ, ಹಿರೋಶಿಮಾ ದಿನ, ಸ್ವಾತಂತ್ರ್ಯೋತ್ಸವ ಆಚರಣೆ, ಸಾಕ್ಷರತಾ ದಿನಾಚರಣೆ, ಓಝೋನ್ ದಿನಾಚರಣೆ, ಡ್ರೈ

ಡೇ, ಶಾರದಾ ಪೂಜೆ, ಗಾಂಧಿ ಜಯಂತಿ, ಶಿಶು ದಿನಗಳನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುತ್ತಿದೆ.

ವಾರಕ್ಕೆ ಒಂದು ದಿನ ಎಸ್ ಆರ್ ಜಿ ಸಭೆ ನಡೆಸಿ ಆ ವಾರದ ಶಾಲಾ ಚಟುವಟಿಕೆಗಳು ದಿನಾಚರಣೆಗಳು, ಪಠ್ಯ ವಿಷಯ ಹಾಗೂ ಮಕ್ಕಳ ಕಲಿಕಾ ಸಮಸ್ಯೆಗಳಿಗೆ ಸಂಬಂಧಿಸಿದ ಚರ್ಚಿಸಲಾಗುವುದು ಪರಿಹಾರವನ್ನು ಕಂಡುಕೊಳ್ಳುವುದು ಎಲ್ಲಾ ಅಧ್ಯಾಪಕರು ಸೂಕ್ತ ಸಲಹೆಗಳನ್ನಿತ್ತು ಸಹಕರಿಸುತ್ತಾರೆ. ಬಿ ಆರ್ ಸಿ ಮಟ್ಟದಲ್ಲಿ ನಡೆಸಲ್ಪಡುವ ಶಿಕ್ಷಕರ ತರಬೇತಿಯಲ್ಲಿ ಎಲ್ಲಾ ಅಧ್ಯಾಪಕರು ಸಕ್ರಿಯವಾಗಿ ಭಾಗವಹಿಸುತ್ತಾರೆ. ಹಾಗೂ ಅಲ್ಲಿ ಲಭಿಸಿದ ಮಾಹಿತಿಗಳನ್ನು ತರಗತಿಗಳಲ್ಲಿ ಅಳವಡಿಸಲು ಪ್ರಯತ್ನಿಸುತ್ತಾರೆ. ಒಂದರಿಂದ ನಾಲ್ಕನೇ ತರಗತಿಯವರೆಗೆ ಎಲ್ಲಾ ಮಕ್ಕಳಿಗೂ ಕಂಪ್ಯೂಟರ್ ಶಿಕ್ಷಣವನ್ನು ನೀಡಲಾಗುತ್ತಿದೆ. ಶಾಲಾ ಪ್ರದೇಶದ ಪುಟಾಣಿ ಮಕ್ಕಳಿಗಾಗಿ ಪ್ರೀಪ್ರೈಮರಿಯನ್ನು ನಡೆಸಲಾಗುತ್ತಿದೆ. ಈ ವರ್ಷ ಪ್ರೀ ಪ್ರೈಮರಿಯಲ್ಲಿ 12  ಮಕ್ಕಳನ್ನು ದಾಖಲಾತಿ ಮಾಡಲಾಗಿದೆ. ಶೈಕ್ಷಣಿಕ ವರ್ಷ ಆರಂಭದಲ್ಲಿ ಮಕ್ಕಳಿಗೆ ನೋಟು ಪುಸ್ತಕ ಹಾಗೂ ಒಂದನೇ ತರಗತಿಯ ಮಕ್ಕಳಿಗೆ ಸ್ಲೇಟ್, ಬಳಪ,ಪೆನ್ಸಿಲು ವಿತರಿಸಲಾಗುತ್ತದೆ. ಮಕ್ಕಳಿಗೆ ಆಟವಾಡಲು ಜಾರು ಬಂಡಿ ವಿಶಾಲವಾದ ಮೈದಾನ ವ್ಯವಸ್ಥೆ ಇದೆ. ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕ ಮೂತ್ರದೊಡ್ಡಿ ಹಾಗೂ ಶೌಚಾಲಯದ ವ್ಯವಸ್ಥೆ ಇದೆ. ಉಪಜಿಲ್ಲಾ ಮಟ್ಟದ ಶಾಲಾ-ಕಲೋತ್ಸವ, ವಿಜ್ಞಾನ ಮೇಳ, ಗಣಿತ ಮೇಳ, ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗಳಿಸಲಾಗಿದೆ.

ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳ ಪ್ರತಿಭೆಯನ್ನು ಅನಾವರಣಗೊಳಿಸಲು ವರ್ಷಂ ಪ್ರತಿ ಶಾಲಾ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿದ್ದು ಶಾಲೆಯ ಎಲ್ಲಾ ಮಕ್ಕಳನ್ನು ಭಾಗವಹಿಸುವಂತೆ ಮಾಡಲಾಗುತ್ತಿದೆ. ಮಕ್ಕಳ ಮನೋವಿಕಾಸಕ್ಕಾಗಿ ಶೈಕ್ಷಣಿಕ ಪ್ರವಾಸವನ್ನು ಕೈಗೊಳ್ಳಲಾಗಿದೆ. ಪ್ರತಿದಿನ ಬೆಳಗ್ಗೆ ಎಸೆಂಬ್ಲಿಯನ್ನು ನಡೆಸಲಾಗುತ್ತಿದ್ದು ಅಸೆಂಬ್ಲಿಯಲ್ಲಿ ಶ್ಲೋಕ, ಯೋಗ ನಡೆಸಲಾಗುತ್ತಿದೆ, ದಿನಕ್ಕೊಬ್ಬ ವಿದ್ಯಾರ್ಥಿ ಎಸೆ೦ ಬ್ಲಿಗೆ ನೇತೃತ್ವ ವಹಿಸುತ್ತಾನೆ. ಇದರಿಂದಾಗಿ ಪ್ರತಿಯೊಬ್ಬರಿಗೂ ನಾಯಕತ್ವ ಗುಣ ಬೆಳೆಯುವುದು. ಎಸೆ೦ ಬ್ಲಿಯಲ್ಲಿ ಪ್ರತಿದಿನ ಚಿಂತನ ಕಾರ್ಯಕ್ರಮವನ್ನು ನಡೆಸಲಾಗುತ್ತಿದ್ದು ದಿನಕೊಬ್ಬ ಅಧ್ಯಾಪಕರು ಇದರ ನೇತೃತ್ವವನ್ನು ವಹಿಸುತ್ತಾರೆ. ಪ್ರತಿ ಶುಕ್ರವಾರಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಅಸೆಂಬ್ಲಿ ನಡೆಸಲಾಗುವುದು. ಶಾಲಾ ಲೈಬ್ರೆರಿಯಲ್ಲಿ ಸಾಕಷ್ಟು ಪುಸ್ತಕಗಳಿವೆ. ಅವುಗಳನ್ನು ಆಯಾ ತರಗತಿಗನುಗುಣವಾಗಿ ಅಧ್ಯಾಪಕರು ತರಗತಿಗಳಲ್ಲಿ ಅದನ್ನು ಉಪಯೋಗಿಸುತ್ತಾರೆ. ಒಟ್ಟಿನಲ್ಲಿ ಎಲ್ಲಾ ವಿಷಯಗಳಲ್ಲಿಯೂ ನಮ್ಮ ಶಾಲೆಯು ಅಭಿವೃದ್ಧಿಯ ಪಥದಲ್ಲಿ ಮುನ್ನಡೆಯುತ್ತಿದ್ದು ಈಗಾಗಲೇ ತಿಳಿಸಿದ ಕೊರತೆಗಳನ್ನು ನೀಗಿಸುವಲ್ಲಿ ಆಡಳಿತ ಮಂಡಳಿಯೊಂದಿಗೆ ಸ್ಥಳೀಯ ಆಡಳಿತ ಸಂಸ್ಥೆಗಳು ಹಾಗೂ ಸರಕಾರದ ಸಹಾಯ ಸಹಕಾರಗಳು ಅಗತ್ಯ ಎಂಬುದು ನಮ್ಮ ಅನಿಸಿಕೆ.

# SWOT Analysis of the school

## Strength

- ಮಕ್ಕಳ ಕಲಿಕಾ ಕಾರ್ಯಗಳಲ್ಲಿ ಆಸಕ್ತಿ ತೋರುವ ಹೆತ್ತವರು
- ಉತ್ತಮ ಮಾರ್ಗದರ್ಶಕರ ಪ್ರೋತ್ಸಾಹ
- ಪ್ರಾಮಾಣಿಕತೆಯಿಂದ ಕಾರ್ಯವೆಸಗುವ ಉತ್ಸಾಹಿ ಯುವ ಅಧ್ಯಾಪಕರ ತಂಡ
- ಐಟಿಯಲ್ಲಿ ಸಾಕಷ್ಟು ನುರಿತ ಅಧ್ಯಾಪಕರ ಸೇವೆ

## Weakness

- ಹಳೆ ವಿದ್ಯಾರ್ಥಿಗಳ ಹಾಗೂ ಊರವರ ಸಮರ್ಪಣಾ ಭಾವದ ಭಾಗವಹಿಸುವಿಕೆಯ ಕೊರತೆ
- ಊರಲ್ಲಿ ಮಕ್ಕಳ ಕೊರತೆ
- ಶಾಲೆಯ ಮೇಲ್ನೋಟ ವಹಿಸದ ಹಾಗೂ ಸರಿಯಾಗಿ ಕಾರ್ಯನಿರ್ವಹಿಸದ ವ್ಯವಸ್ಥಾಪಕ ಸಮಿತಿ

## Opportunity

- ಪರಿಸರದೊಂದಿಗೆ ಕಲೆತು ಬೆರೆತು ಕಲಿಯಲು ಯೋಗ್ಯವಾದ ಗ್ರಾಮೀಣ ವಿದ್ಯಾಲಯ.
- ದೂರದ ಪ್ರದೇಶದಿಂದ ಸುಗಮ ಸಂಚಾರಕ್ಕಾಗಿ ಶಾಲಾ ವಾಹನ ವ್ಯವಸ್ಥೆ

## Threats

➔ ಹತ್ತಿರ ಹತ್ತಿರ ಶಾಲೆಗಳು ಫೀಡಿಂಗ್ ಏರಿಯಾ ಕಡಿಮೆಯಾಗಿರುವುದು ಇದರಿಂದಾಗಿ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ

➔ ಮನೆಗಳ ಸಂಖ್ಯೆ ಕಡಿಮೆ ಹಾಗೂ ಹೆಚ್ಚು ಕೃಷಿ ಭೂಮಿ ಹೆಚ್ಚಿನ ಮನೆಗಳಲ್ಲೂ ಯುವಕರು ವಲಸೆ ಹೋದ ಕಾರಣ

## ಪ್ರಸ್ತುತ ವರ್ಷದಲ್ಲಿ ಆದ್ಯತೆ ನೀಡಬೇಕಾದ ಚಟುವಟಿಕೆಗಳು

- ಇಂಗ್ಲೀಷ್ ಮಾತನಾಡೋಣ
- ನಲಿ ಕಲಿ
- ರಚನೆ
- ಜಗವ ತಿಳಿಯೋಣ
- ಭೌದ್ಧಿಕ ಕಸರತ್ತು
- ಮಾಡಿ ಕಲಿ
- ಶಿಸ್ತಿನ ಪಾಠ
- ಮಾಹಿತಿ ತಂತ್ರಜ್ಞಾನದೆಡೆಗೆ

## ಇಂಗ್ಲೀಷ್ ಮಾತನಾಡೋಣ

| ಚಟುವಟಿಕೆ/ಚಟುವಟಿಕಾ ರೀತಿ | ಕಾಲಾವಧಿ | ಉದ್ದೇಶ | ಜವಾಬ್ದಾರಿ |
|---|---|---|---|
| ಪ್ರತಿ ತರಗತಿಯಲ್ಲಿ ~~ನಿರ್ದಿಷ್ಟ~~ ವಿಷಯಾಧಾರಿತವಾಗಿ ಇಂಗ್ಲೀಷ್ ಮಾತನಾಡಲು ಚಟುವಟಿಕೆಗಳನ್ನು ಆಯೋಜಿಸುವುದು | ಜೂನ್ ನಿಂದ ಮಾರ್ಚ ಬೆಳಗ್ಗೆ 9 ರಿಂದ **9.45** | ಒಂದರಿಂದ ನಾಲ್ಕನೇ ತರಗತಿಯವರೆಗಿನ ಮಕ್ಕಳು ಇಂಗ್ಲೀಷ್‌ನಲ್ಲಿ ವ್ಯವಹರಿಸಲು ಕಲಿಯುವುದು | ಕ್ಲಾಸ್ ಅಧ್ಯಾಪಕರು |

## ಕಾವ್ಯೋತ್ಸವ

| ಚಟುವಟಿಕೆ /ಚಟುವಟಿಕಾ ರೀತಿ | ಕಾಲಾವಧಿ | ಉದ್ದೇಶ | ಜವಾಬ್ದಾರಿ |
|---|---|---|---|
| ಕಾವ್ಯೋತ್ಸವ | ಜೂನ್ -ಮಾರ್ಚ್ | ಕವಿತೆಗಳ ಆಶಯ ಕಲಿಕೆ<br>ತಾಳಗಳ ಪರಿಚಯ<br>ಕವಿತಾ ರಚನೆಗೆ ಆಧ್ಯತೆ | ಕ್ಲಾಸ್ ಟೀಚರ್ |

## ಕಾವ್ಯಾವಿಷ್ಕಾರ

| ಚಟುವಟಿಕೆ /ಚಟುವಟಿಕಾ ರೀತಿ | ಕಾಲಾವಧಿ | ಉದ್ದೇಶ | ಜವಾಬ್ದಾರಿ |
|---|---|---|---|
| ಕಾವ್ಯಾವಿಷ್ಕಾರ | ಜೂನ್ -ಮಾರ್ಚ್ | ಕವಿತೆಗಳ ಆಶಯ ಕಲಿಕೆ<br>ಕವಿತೆಗಳನ್ನು ವಿವಿಧ<br>Discourse ಗಳಿಗೆ<br>ಬದಲಾಯಿಸುವುದು.<br>ಕವಿತಾ ರಚನೆಗೆ ಆಧ್ಯತೆ | ಕ್ಲಾಸ್ ಟೀಚರ್ |

## ಸೃಜನಾತ್ಮಕ ದಿನಾಚರಿ

| ಚಟುವಟಿಕೆ /ಚಟುವಟಿಕಾ ರೀತಿ | ಕಾಲಾವಧಿ | ಉದ್ದೇಶ | ಜವಾಬ್ದಾರಿ |
|---|---|---|---|
| ಸೃಜನಾತ್ಮಕ ದಿನಾಚರಿ/<br>ಸಂಯುಕ್ತ ಡೈರಿ | ಜೂನ್ -ಮಾರ್ಚ್ | ಅನುಭವಗಳ ಆಧಾರದಲ್ಲಿ<br>ಭಾಷೆಯ ಬರವಣಿಗೆ | ಕ್ಲಾಸ್ ಟೀಚರ್ |

# Reader's Theatre

| ಚಟುವಟಿಕೆ /ಚಟುವಟಿಕಾ ರೀತಿ | ಕಾಲಾವಧಿ | ಉದ್ದೇಶ | ಜವಾಬ್ದಾರಿ |
|---|---|---|---|
| Readers Theatre | ಜೂನ್ -ಮಾರ್ಚ್ | ಗಟ್ಟಿ ಓದುವಿಕೆಗೆ ಪ್ರಾಧಾನ್ಯತೆ ಮಕ್ಕಳಿಗೆ ಸ್ವರದ ಏರಿಳಿತ ತಿಳಿಯುವುದು | ಕ್ಲಾಸ್ ಟೀಚರ್ |

## ನಲಿ ಕಲಿ

| ಚಟುವಟಿಕೆ/ಚಟುವಟಿಕಾ ರೀತಿ | ಕಾಲಾವಧಿ | ಉದ್ದೇಶ | ಜವಾಬ್ದಾರಿ |
|---|---|---|---|
| ಪಾಠ ಭಾಗಗಳಿಗೆ ಹೊಂದಿಕೊಂಡು ಕತೆ ಕವಿತೆ ನಾಟಕಗಳನ್ನು ಪ್ರಸ್ತುತಪಡಿಸಲು ಬಾಲಸಭೆಗಳನ್ನು ಏರ್ಪಡಿಸುವುದು | ಪ್ರತಿ ತಿಂಗಳ ಮೊದಲ ಬುಧವಾರ ಸಂಜೆ 3 ರಿಂದ 4 | ಸಭಾ ಕಂಪನವನ್ನು ದೂರ ಮಾಡುವುದು ಸಾಮರ್ಥ್ಯ ಪ್ರದರ್ಶಿಸಲು ಅವಕಾಶ | ವಿದ್ಯಾರಂಗ ಕನ್ವೀನರ್ |

## ರಚನೆ

| ಚಟುವಟಿಕೆ/ಚಟುವಟಿಕಾ ರೀತಿ | ಕಾಲಾವಧಿ | ಉದ್ದೇಶ | ಜವಾಬ್ದಾರಿ |
|---|---|---|---|
| ಮೂರು ತಿಂಗಳಿಗೊಂದು ಮಕ್ಕಳಿಂದ ರಚಿತವಾದ ಹಸ್ತಪತ್ರಿಕೆಯ ಬಿಡುಗಡೆ | ತ್ರೈಮಾಸಿಕ( ಆಗಸ್ಟ್, ನವಂಬರ್ , ಫೆಬ್ರವರಿ ) | ಮಕ್ಕಳ ಸೃಜನಾತ್ಮಕತೆಯನ್ನು ಪ್ರಕಟಪಡಿಸಲು ಅವಕಾಶ | ತರಗತಿ ಅಧ್ಯಾಪಕರು ಹಾಗೂ ವಿದ್ಯಾರಂಗ ಕನ್ವೀನರ್ |

## ಜಗವ ತಿಳಿಯೋಣ

| ಚಟುವಟಿಕೆ/ಚಟುವಟಿಕಾ ರೀತಿ | ಕಾಲಾವಧಿ | ಉದ್ದೇಶ | ಜವಾಬ್ದಾರಿ |
|---|---|---|---|
| ಪ್ರತಿದಿನ ಎಲ್ಲಾ ಮಕ್ಕಳಿಂದ ವಾರ್ತಾಪತ್ರಿಕೆಯನ್ನು ಓದಿಸುವುದು | ಪ್ರತಿದಿನ ಮಧ್ಯಾಹ್ನ 1.30 ರಿಂದ 2 | ನಿರರ್ಗಳ ಓದು ವಿಷಯ ಜ್ಞಾನ | ತರಗತಿ ಅಧ್ಯಾಪಕರು |

## ಬೌದ್ಧಿಕ ಕಸರತ್ತು

| ಚಟುವಟಿಕೆ/ಚಟುವಟಿಕಾ ರೀತಿ | ಕಾಲಾವಧಿ | ಉದ್ದೇಶ | ಜವಾಬ್ದಾರಿ |
|---|---|---|---|
| ವಾರಕ್ಕೊಂದು ಮೋಜಿನ ಗಣಿತ ನೀಡುವುದು | ಜೂನ್ ನಿಂದ ಮಾರ್ಚ್ ಪ್ರತೀ ಶುಕ್ರವಾರ | ಚಿಂತನಾ ಸಾಮರ್ಥ್ಯ, ಸಮಸ್ಯೆಯ ಪರಿಹಾರದ ಸಾಮರ್ಥ್ಯವನ್ನು ಬೆಳೆಸಲು | ಗಣಿತ ಕ್ಲಬ್ |

## ಮಾಡಿ ಕಲಿ

| ಚಟುವಟಿಕೆ/ಚಟುವಟಿಕಾ ರೀತಿ | ಕಾಲಾವಧಿ | ಉದ್ದೇಶ | ಜವಾಬ್ದಾರಿ |
|---|---|---|---|
| W.E ಕಮ್ಮಟ ಏರ್ಪಡಿಸುವುದು.ಆಸಕ್ತರಿಗೆ ತರಬೇತಿ ನೀಡುವುದು | ಜೂನ್ ನಿಂದ ಮಾರ್ಚ್ ತಿಂಗಳಿಗೊಂದು | ಮಕ್ಕಳ ಬಹುಮುಖ ಪ್ರತಿಭೆಯನ್ನು ಪ್ರೋತ್ಸಾಹಿಸುವುದು | |

## ಶಿಸ್ತಿನ ಪಾಠ

| ಚಟುವಟಿಕೆ/ಚಟುವಟಿಕಾ ರೀತಿ | ಕಾಲಾವಧಿ | ಉದ್ದೇಶ | ಜವಾಬ್ದಾರಿ |
|---|---|---|---|
| ಮಕ್ಕಳಿಗೆ ಯೋಗ, ಮಾಸ್ ಡ್ರಿಲ್‌ನ ತರಬೇತಿ | ಜೂನ್ ನಿಂದ ಮಾರ್ಚ್ ವಾರಕ್ಕೊಂದು ತರಬೇತಿ | ಏಕಾಗ್ರತೆ, ದೈಹಿಕ ಆರೋಗ್ಯ | ಸುರಕ್ಷಾ ಕ್ಲಬ್ |

# ಮಾಹಿತಿ ತಂತ್ರಜ್ಞಾನದೆಡೆಗೆ

| ಚಟುವಟಿಕೆ/ಚಟುವಟಿಕಾ ರೀತಿ | ಕಾಲಾವಧಿ | ಉದ್ದೇಶ | ಜವಾಬ್ದಾರಿ |
|---|---|---|---|
| ಪ್ರತಿ ತರಗತಿಗಳಿಗೂ ಕಂಪ್ಯೂಟರ್ ಶಿಕ್ಷಣ | ಜೂನ್ ನಿಂದ ಮಾರ್ಚ್ ವಾರಕ್ಕೊಂದು ತರಬೇತಿ | ಮಾಹಿತಿ ತಂತ್ರಜ್ಞಾನದ ಅರಿವು, ಪಾಠದ ಚಟುವಟಿಕೆಗಳನ್ನು ಮಾಡಲು | ಕಂಪ್ಯೂಟರ್ ಅಧ್ಯಾಪಿಕೆ |

| | | |
|---|---|---|
| ಭೌತಿಕ ಸೌಕರ್ಯಗಳು | ಜೂನ್ ನಿಂದ | ಶಾಲಾ ಆವರಣ ಗೋಡೆ, ವರ್ಣ ರಂಜಿತ ತರಗತಿ ಕೋಣೆಗಳು, Painting, ಮೇಲಾವಣಿ ಕೆಲಸ ಹಾಗೂ ಇತರ ಭೌತಿಕ ಸೌಕರ್ಯಗಳ ನ್ನು ಮಾಡಲಿರುವ ಯೋಜನೆ. |

## 1.ಹಸಿರು ನಿರ್ಮಲ ವಿದ್ಯಾಲಯ

| ಚಟುವಟಿಕೆಗಳು | ವಿವರಗಳು | ಕಾಲಾವದಿ | ಜವಾಬ್ಧಾರಿ | ಮೋನಿಟರಿಂಗ್ | ಸಾಧನೆಗಳು |
|---|---|---|---|---|---|
| 1. ಜೈವ ಬೇಲಿ ನಿರ್ಮಾಣ | ಶಾಲಾ ಆವರಣದ ಸುತ್ತ ಮಹಾಗನಿ ಗಿಡಗಳನ್ನು ನೆಟ್ಟು ಬೇಲಿ ನಿರ್ಮಿಸುವುದು | ಜುಲೈ ತಿಂಗಳ 1 ನೇ ತಾರೀಕಿನಿಂದ ಮಾರ್ಚ್ 31 ರ ತನಕ | ECO Club, ಮಕ್ಕಳ ಗುಂಪು | HM ,PTA | ಪರಿಸರ ಸಂರಕ್ಷಣಾ ಮನೋಭಾವ ಮಕ್ಕಳಲ್ಲಿ ಬೆಳೆಸುವುದು |
| 2. ಹೂದೋಟ ಸುಂದರಗೊಳಿಸುವುದು | ಔಷಧೀಯ ತೋಟದಲ್ಲಿ ಹೆಚ್ಚಿನ ಗಿಡಗಳನ್ನು ನೆಡವುದು ಹಾಗೂ ಆರೈಕೆ. ಹೂದೋಟವನ್ನು ಸರಿಯಾಗಿ ಕತ್ತರಿಸಿ ನಿತ್ಯ ಹೂ ನೀಡುವ ಕೆಲವು ಗಿಡಗಳನ್ನು ನೆಡುವುದು. ನೀರೆರೆದು ಪೋಷಿಸುವುದು. | ಜೂನ್ ತಿಂಗಳಿಂದ ಆರಂಭಿಸಿ ವರ್ಷದ ಕೊನೆಯ ವರೆಗೆ. | ಪ್ರತೀ ತರಗತಿಯ ದೈನಂದಿನ ಗುಂಪು, ECO CLUB, TEACHERS | HM. TEACHERS | ಮಕ್ಕಳಲ್ಲಿ ಸೌಂದರ್ಯ ಆಸ್ವಾದನೆಯನ್ನು ಬೆಳೆಸುವುದು. ಸಣ್ಣ ಪುಟ್ಟ ಕೆಲಸಗಳಲ್ಲಿ ಸ್ವಾನುಭಾವ ಸಾಧನೆ. |

| | | | | | |
|---|---|---|---|---|---|
| 3. ಶುಚಿತ್ವಪೂರ್ಣವೂ ಆಕರ್ಷಕವೂ ಆದ ತರಗತಿ ಕೊಠಡಿಗಳು | ತರಗತಿ ಶುಚೀಕರಣಕ್ಕಾಗಿ ಮಕ್ಕಳನ್ನು ಗುಂಪು ಮಾಡಿ ಜವಾಬ್ದಾರಿ ವಹಿಸುವುದು. | ಜೂನ್ ತಿಂಗಳಿಂದ ಆರಂಭಿಸಿ ವರ್ಷದ ಕೊನೆಯ ವರೆಗೆ. | ಗುಂಪಿನ ನಾಯಕರು, CLASS TEACHERS | HM. PTA | ಸಣ್ಣ ಪುಟ್ಟ ಕೆಲಸಗಳಲ್ಲಿ ಸ್ವಾನುಭಾವ ಸಾಧನೆ. ವ್ಯಕ್ತಿ ಶುಚಿತ್ವ |

## 2. ಪ್ರಯೋಗ ಶಾಲೆ

| | | | | | |
|---|---|---|---|---|---|
| 1.ಉಪಕರಣಗಳ ಲಭ್ಯತೆ | ಸ್ಥಳೀಯವಾಗಿ ಲಭಿಸುವ ಉಪಕರಣಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಉಪಯೋಗಿಸುವುದು. | ಜೂನ್ ತಿಂಗಳಿಂದ ಆರಂಭಿಸಿ ವರ್ಷದ ಕೊನೆಯ ವರೆಗೆ | CLASS TEACHERS, ಮಕ್ಕಳು | HM. | ಸಂಗ್ರಹಿಸುವ ಹಾಗೂ ಉಪಯೋಗಿಸುವ ಸಾಮರ್ಥ್ಯ |

## 3.ICT

| | | | | | |
|---|---|---|---|---|---|
| 1. ಕಂಪ್ಯೂಟರ್‌ಗಳ ಸಜ್ಜೀಕರಣ. | ಶಾಲಾ ಕಂಪ್ಯೂಟರ್‌ಗಳನ್ನು ಕಲಿಕೆಗೆ ಅನುಯೋಜ್ಯಕರ ವಾದ ರೀತಿಯಲ್ಲಿ ಸಜ್ಜೀಕರಿಸುವುದು. | ಜೂನ್ 1 ನೇ ತಾರೀಕಿನಿಂದ ಮಾರ್ಚ್ 31 ರ ತನಕ | CLASS TEACHERS | HM. PTA | |
| 2. ಪ್ರತೀ ತರಗತಿಗೆ ಕಂಪ್ಯೂಟರ್ ಶಿಕ್ಷಣ | ಶಾಲಾ Time table ಪ್ರಕಾರ ಎಲ್ಲಾ ಮಕ್ಕಳಿಗೂ ಕಂಪ್ಯೂಟರ್ ಶಿಕ್ಷಣ ನೀಡುವುದು. | ಜೂನ್ 1 ನೇ ತಾರೀಕಿನಿಂದ ಮಾರ್ಚ್ 31 ರ ತನಕ | CLASS TEACHERS | HM. PTA | ಮಕ್ಕಳು ಕಂಪ್ಯೂಟರ್ ಉಪಯೋಗಿಸಲಿರುವ ಸಾಮರ್ಥ್ಯಗಳಿಸುವರು |

## 4. Comprehensive health and sports programme

| | | | | | |
|---|---|---|---|---|---|
| 1.ಫಲಪ್ರದವಾದ FAB | ಮಕ್ಕಳ ಪ್ರಥಮ ಚಿಕಿತ್ಸೆಗೆ FAB ಫಲಪ್ರದವಾಗಿ ಉಪಯೋಗಿಸುವುದು | ಜೂನ್ 1 ನೇ ತಾರೀಕಿನಿಂದ ಮಾರ್ಚ್ 31 ರ ತನಕ | ಸುರಕ್ಷಾ ಕ್ಲಬ್, CLASS TEACHERS | HM. PTA | ಮಕ್ಕಳು ಪ್ರಥಮ ಚಿಕಿತ್ಸೆ ಎಲ್ಲಿ ಹೇಗೆ ಎಂಬುದನ್ನು ತಿಳಿಯುವರು |
| 2.FABಗೆ ಬೇಕಾದ ವಸ್ತುಗಳ ಸಂಗ್ರಹ, ಸಜ್ಜೀಕರಣ | ಪ್ರಥಮ ಚಿಕಿತ್ಸೆಗೆ ಬೇಕಾದ ವಸ್ತುಗಳನ್ನು ಖರೀದಿಸಿ ಸಜ್ಜೀಕರಿಸುವುದು. | ಜೂನ್ 1 ನೇ ತಾರೀಕಿನಿಂದ ಮಾರ್ಚ್ 31 ರ ತನಕ | ಸುರಕ್ಷಾ ಕ್ಲಬ್, | HM, ಸುರಕ್ಷಾ ಕ್ಲಬ್ Convener | |
| 3. ಶುಚಿತ್ವ ಹಾಗೂ ಆರೋಗ್ಯಕರವೂ ಆದ ಅಭ್ಯಾಸ | ವಾರಕ್ಕೊಮ್ಮೆ ಮಕ್ಕಳ ವ್ಯಕ್ತಿ ಶುಚಿತ್ವ ಹಾಗೂ ಆರೋಗ್ಯದ ಕುರಿತು ಗಮನ, ಪ್ರತೀ ತರಗತಿಗಳಿಗೆ ಕುಡಿಯುವ ನೀರಿನ ಸೌಲಭ್ಯ, ಮಕ್ಕಳಿಗೆ ಬೇಕಾದಷ್ಟು ಮೂತ್ರ ದೊಡ್ಡಿ ಮತ್ತು ಶೌಚಾಲಯ, ಪ್ರತೀ ದಿನ ಮಕ್ಕಳ ಗುಂಪು ಮಾಡಿ ಅಧ್ಯಾಪಕರ ಸಹಾಯದೊಂದಿಗೆ ಶುಚೀಕರಣ. | ಜೂನ್ 1 ನೇ ತಾರೀಕಿನಿಂದ ಮಾರ್ಚ್ 31 ರ ತನಕ | ಸುರಕ್ಷಾ ಕ್ಲಬ್, CLASS TEACHERS | HM, PTA, ಸುರಕ್ಷಾ ಕ್ಲಬ್ Convene | ಮಕ್ಕಳಲ್ಲಿ ವ್ಯಕ್ತಿ ಶುಚಿತ್ವ ಹಾಗು ಆರೋಗ್ಯಕರವೂ ಆದ ಅಭ್ಯಾಸವನ್ನು ಬೆಳೆಸುವುದು. ಸಣ್ಣ ಪುಟ್ಟ ಕೆಲಸಗಳಲ್ಲಿ ಸ್ವಾನುಭಾವ ಸಾಧನೆ. |

| | | | | | |
|---|---|---|---|---|---|
| 4. ಆಟೋಪಕರಣಗಳ ಲಭ್ಯತೆ | ಗ್ರಾಮೀಣ ಆಟಗಳಿಗೆ ಹಾಗು ಇತರ ಆಟಗಳಿಗೆ ಬೇಕಾದ ಉಪಕರಣಗಳನ್ನು ಖರೀದಿಸಿ, ಮಕ್ಕಳಿಗೆ ಆಟಗಳನ್ನು ಆಡಿಸುವುದು. | ಜೂನ್ 1 ನೇ ತಾರೀಕಿನಿಂದ ಮಾರ್ಚ್ 31 ರ ತನಕ | TEACHERS | HM, PTA, | ಮಕ್ಕಳಲ್ಲಿ ಶಾರೀರಿಕ ಹಾಗು ಮಾನಸಿಕ ಬೆಳವಣಿಗೆ ಉಂಟಾಗುವುದು. ಗ್ರಾಮೀಣ ಆಟಗಳ ಕುರಿತು ತಿಳುವಳಿಕೆ ಮೂಡುವುದು. |

## 5.Democratic expression platforms

| | | | | | |
|---|---|---|---|---|---|
| 1.ಕ್ಲಬ್‌ಗಳ ರೂಪೀಕರಣ | ನಾಲ್ಕು ಕ್ಲಬ್‌ಗಳನ್ನು ರೂಪೀಕರಿಸುವುದು, ಉದ್ಘಾಟನೆ, ಮಕ್ಕಳ ಭಾಗವಹಿಸುವಿಕೆ, ಕ್ಲಬ್ ಚಟುವಟಿಕೆಗಳನ್ನು SRG ಯಲ್ಲಿ ಚರ್ಚಿಸಿ ಪಟ್ಟಿ ಮಾಡುವುದು, ವರ್ಷಕ್ಕೊಂದು ಡಿಬೆಟ್, ಸೆಮಿನಾರ್‌ಗಳನ್ನು ನಡೆಸುವುದು. | ಜೂನ್ 1 ನೇ ತಾರೀಕಿನಿಂದ ಮಾರ್ಚ್ 31 ರ ತನಕ | Club conveners | HM, PTA, | ಸಣ್ಣ ಪುಟ್ಟ ಕೆಲಸಗಳಲ್ಲಿ ಸ್ವಾಮಭಾವ ಸಾಧನೆ. ಮಕ್ಕಳಲ್ಲಿ ಕಲೆ ಹಾಗು ವೃತ್ತಿಪರ ಸಾಮಥ್ಯ ಬೆಳೆಯುವುದು. |

## 6. SRG

| | | | | | |
|---|---|---|---|---|---|
| 1.SRG ಸಭೆಗಳನ್ನು ಫಲಪ್ರದಗೊಳಿಸುವುದು | ಎಲ್ಲಾ ವಾರಗಳಲ್ಲಿ ಸಭೆ ಸೇರುವುದು | ಜೂನ್ ತಿಂಗಳಿಂದ | SRG Convener | HM | ಫಲಪ್ರದವಾದ ಯೋಜನೆ, ಉತ್ತಮ ರೀತಿಯಲ್ಲಿ ನಡೆಸುವಿಕೆ, ಎಲ್ಲಾ ಮಕ್ಕಳಿಗೆ ಸಾಧನೆಗಳನ್ನು ವರ್ಗಾಯಿಸುವುದು. |

## 7. Noon meal programme

| | | | | | |
|---|---|---|---|---|---|
| 1. ಶುಚೀಕರಣ | ಅಡುಗೆ ಕೋಣೆ ಹಾಗು ಪಾತ್ರೆಗಳನ್ನು ಶುಚಿಯಾಗಿರಿಸುವುದು. ಶುಚೀಕರಣಕ್ಕೆ ಬೇಕಾದ ವಸ್ತುಗಳನ್ನು ಖರೀದಿಸುವುದು | ಜೂನ್ ತಿಂಗಳಿಂದ | School cook | HM, PTA | ಮಕ್ಕಳಿಗೆ ಶುಚಿತ್ವವೂ ರುಚಿಕರವೂ ಆದ ಆಹಾರ |

## 8.Class Room setup

| | | | | |
|---|---|---|---|---|
| 1.ICT | ಎಲ್ಲಾ ತರಗತಿಗಳ ಲ್ಲೂ ICT ಬಳಕೆ | ಜೂನ್ ತಿಂಗಳಿಂದ | Teachers, HM | HM,PTA |

## 9.Inclusive Education

| | | | | |
|---|---|---|---|---|
| 1.Academic Support to CWSN | CWSN ಮಕ್ಕಳಿಗೆ ವೈಯಕ್ತಿಕ ಗಮನ | ಜೂನ್ ತಿಂಗಳಿಂದ | Teachers | HM |

## 10.Parent Teacher Interaction Platforms

| | | | | | |
|---|---|---|---|---|---|
| 1.PTA, Class PTA | ಪ್ರತಿ ತಿಂಗಳು ಪಿ ಟಿ ಎ ಸಭೆಯನ್ನು ಕರೆಯುವುದು | ಜೂನ್ ತಿಂಗಳಿಂದ | HM | HM, PTA | ರಕ್ಷಕರು ಮತ್ತು ಅಧ್ಯಾಪಕರ ನಡುವೆ ಉತ್ತಮ ಬಾಂಧವ್ಯ ಬೆಳೆಯುವುದು |

## 11. ಗ್ರಂಥಾಲಯ

| | | | | | |
|---|---|---|---|---|---|
| 1. ಓದುವಿಕೆಯನ್ನು ದೃಢಪಡಿಸುವುದು, ವಾಚನಾ ಸಶಕ್ತೀಕರಣ | Library ಯಲ್ಲಿ ತರಗತಿಯ ಆಧಾರದಲ್ಲಿ ಸಜ್ಜುಗೊಳಿಸಿದ ಪುಸ್ತಕಗಳು, ಮಕ್ಕಳಿಗೆ ಜವಾಬ್ದಾರಿ ನೀಡುವುದು, ಮಕ್ಕಳ ಸಹಾಯದಿಂದ ಪುಸ್ತಕ ವಿತರಣೆ, ಸಂಬಂಧಪಟ್ಟ ದಾಖಲೆಗಳನ್ನು ಇಡುವುದು,ಟಿಪ್ಪಣಿ ತಯಾರಿಸಿ ಮಂಡನೆ, ಸಂಚಿಕೆಗಳು Class library | ಜೂನ್ ತಿಂಗಳಿಂದ | Class teachers, class leaders | HM, PTA | ಮಕ್ಕಳಲ್ಲಿ ಓದುವಿಕೆ ಹವ್ಯಾಸ ಬೆಳೆಯುವುದು, |

## 12. Teaching learing materials

| | | | | | |
|---|---|---|---|---|---|
| 1. ಎಲ್ಲಾ ತರಗತಿಗಳಲ್ಲಿ ಎಲ್ಲಾ ಪ್ರಯೋಗಗಳನ್ನು ಮಾಡುವುದು. | TLM ಗಳನ್ನು ಉಪಯೋಗಿಸಿ ಎಲ್ಲಾ ತರಗತಿಗಳಲ್ಲಿ ಪಠ್ಯಪುಸ್ತಕದ ಎಲ್ಲಾ | ಜೂನ್ ತಿಂಗಳಿಂದ | Class teachers, | HM | |

| | | | | | |
|---|---|---|---|---|---|
| | ಪ್ರಯೋಗಳನ್ನು ಮಾಡುವುದು. | | | | |

## 13. First standard first class

| | | | | | |
|---|---|---|---|---|---|
| 1. ಶುಚಿತ್ವಪೂರ್ಣವೂ ಆಕರ್ಷಕವೂ ಆದ ತರಗತಿ | ತರಗತಿ ಕೋಣೆಗಳನ್ನು ಶುಚಿಯಾಗಿರಿಸುವುದು, ಕಲಿಕಾ ಸಾಮಾಗ್ರಿಗಳನ್ನು ಕ್ರಮಬದ್ಧವಾಗಿ ಸಜ್ಜೀಕರಿಸುವುದು | ಜೂನ್ 1 ನೇ ತಾರೀಕಿನಿಂದ ಮಾರ್ಚ್ 31 ರ ತನಕ | Class teacher | HM, PTA | |

## 14. Enhancement of English

| | | | | | |
|---|---|---|---|---|---|
| 1. ವಾರಕ್ಕೊಮ್ಮೆ ಇಂಗ್ಲಿಷ್ ಭಾಷೆಯಲ್ಲಿ ಎಸೆಂಬ್ಲಿ | ಪ್ರತೀ ಶುಕ್ರವಾರ ಇಂಗ್ಲಿಷ್ ಭಾಷೆಯಲ್ಲಿ ಎಸೆಂಬ್ಲಿಯನ್ನು ಮಾಡುವುದು, ಇಂಗ್ಲಿಷ್ ಭಾಷೆಯಲ್ಲಿ ಪ್ರತಿಜ್ಞೆ ಹೇಳುವುದು, ಇಂಗ್ಲಿಷ್ ಭಾಷೆಯಲ್ಲಿ ಚಿಂತನ ಹೇಳುವುದು. | ಜೂನ್ 1 ನೇ ತಾರೀಕಿನಿಂದ ಮಾರ್ಚ್ 31 ರ ತನಕ ಪ್ರತೀ ಶುಕ್ರವಾರ. | teachers | HM, PTA | ಮಕ್ಕಳು ಇಂಗ್ಲಿಷ್ ಭಾಷೆಯಲ್ಲಿ ಪ್ರಾವಿಣ್ಯತೆ ಹೊಂದುವರು. |

| | | | | | |
|---|---|---|---|---|---|
| | | | | | |

## 15. Development of basic skills

| | | | | | |
|---|---|---|---|---|---|
| 1. ಹಿಂದುಳಿದ ಮಕ್ಕಳಿಗೆ ಸಾಕ್ಷರಂ ಕಾರ್ಯಕ್ರಮ | ಹಿಂದುಳಿದ ಮಕ್ಕಳನ್ನು Pre- test ನ ಮೂಲಕ ಕಂಡುಕೊಳ್ಳುವುದು, ಹಿಂದುಳಿದ ಮಕ್ಕಳಿಗೆ ಪ್ರತ್ಯೇಕ ಸಮಯ ಉಪಯೋಗಿಸಿ ಚಟುವಟಿಕೆಗಳನ್ನು ನೀಡುವುದು. | ಜೂನ್ 1 ನೇ ತಾರೀಕಿನಿಂದ ಮಾರ್ಚ್ 31 ರ ತನಕ ಪ್ರತೀ ದಿನ ಒಂದು ಗಂಟೆ. | Class teacher | HM, SRG, PTA | 3 ಮತ್ತು 4ನೇ ತರಗತಿಯ ಮಕ್ಕಳ ಭಾಷಾಪರವಾದ ಹಿಂದುಳಿವಿಕೆಯನ್ನು ಪರಿಹರಿಸುವುದು. |